**ಕರ್ನಾಟಕ ಸರ್ಕಾರ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,ಬೆಂಗಳೂರು**

ಸಂಖ್ಯೆ:–ಸಿ3(7)ಪ್ರಾ.ಶಿ./ಪ್ರೌಶಿ.ವರ್ಗ 01/2015–16 ದಿನಾಂಕ : 08–09–2015

**:ಜ್ಞಾಪನ:**

ವಿಷಯ: 2015–16 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ.

* * * * * *

**ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಅಂತರ ಘಟಕ –ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿ**

**(Primary Assistant Master Cadre and Secondary Assistant Master Cadre Only)**

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಗಳಂತೆ | ಸಮಯ |
|---|---|---|---|
| 1 | 09–09–2015 ಬುಧವಾರ | 3301 ರಿಂದ 3800 ರವರೆಗಿನ ಪ್ರಾಥಮಿಕ ಶಾಲಾ ಸಹಶಿಕ್ಷಕರು (ನಾಲ್ಕು ವಿಭಾಗಗಳ ಕೌನ್ಸಿಲಿಂಗ್ ಸೇರಿ) | ಬೆಳಿಗ್ಗೆ 09:00 ರಿಂದ |
| | | 401 ರಿಂದ 700 ರವರೆಗಿನ ಪ್ರೌಢ ಶಾಲಾ ಸಹಶಿಕ್ಷಕರು (ನಾಲ್ಕು ವಿಭಾಗಗಳ ಕೌನ್ಸಿಲಿಂಗ್ ಸೇರಿ) | ಬೆಳಿಗ್ಗೆ 09:00 ರಿಂದ |

**ಕೌನ್ಸಿಲಿಂಗ್ ನಡೆಯುವ ಸ್ಥಳ:**

1. ಬೆಂಗಳೂರು ವಿಭಾಗ – ಶಿಕ್ಷಕರ ಸದನ, 3RD FLOOR, ಕೆಂಪೇಗೌಡ ರಸ್ತೆ, ಬೆಂಗಳೂರು – 560002.
2. ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು
3. ಕಲಬುರಗಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರಗಿ
4. ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ

**ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.**

**ಪತಿ ಮತ್ತು ಪತ್ನಿ ಇಬ್ಬರು ಸರ್ಕಾರಿ ನೌಕರರು ಪ್ರಕರಣದಲ್ಲಿ**

1. ಪತಿ ಮತ್ತು ಪತ್ನಿ ಇಬ್ಬರೂ ಸೇವೆ ಸಲ್ಲಿಸುತ್ತಿರುವ ಕಛೇರಿಯಿಂದ ಪಡೆದ ಮೂಲ ಸೇವಾ ದೃಢೀಕರಣ ಪತ್ರ,
2. ಪತಿ–ಪತ್ನಿಯ ಸಂಬಂಧ ಸೂಚಿಸುವ ದಾಖಲೆ (ನಾಮನಿರ್ದೇಶನ, ಮತದಾರರ ಚೀಟಿ, ಆಧಾರ್ ಕಾರ್ಡ್)
3. ಕೆ.ಜಿ.ಐಡಿ ಸಂಖ್ಯೆ , ಮೂಲ ವೇತನ ಪ್ರಮಾಣ ಪತ್ರ ( ಇಬ್ಬರ ಹೆಚ್.ಆರ್.ಎಂ.ಎಸ್ ಪ್ರತಿಗಳು ),
4. ವರ್ಗಾವಣೆಯ ಅರ್ಜಿ– ಬಿ.ಇ.ಓ ಅನುಮೋದಿತ ಪ್ರತಿ
5. ಪತಿ ಮತ್ತು ಪತ್ನಿ ಇಬ್ಬರ ಕೆ.ಜಿ.ಐ.ಡಿ ಪಾಲಿಸಿ ಪ್ರತಿಗಳು
6. ಪತಿ ಮತ್ತು ಪತ್ನಿ ಇಬ್ಬರು ಸರ್ಕಾರಿ ನೌಕರರು ಪ್ರಕರಣದಲ್ಲಿ ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ / ಎರಡನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ

**ಪತಿ ಅಥವಾ ಪತ್ನಿ ಒಬ್ಬರು ಸರ್ಕಾರಿ ನೌಕರರು ಪ್ರಕರಣದಲ್ಲಿ**

1. ಪತಿ ಅಥವಾ ಪತ್ನಿ ಸೇವೆ ಸಲ್ಲಿಸುತ್ತಿರುವ ಕಛೇರಿಯಿಂದ ಪಡೆದ ಮೂಲ ಸೇವಾ ದೃಢೀಕರಣ ಪತ್ರ,
2. ಪತಿ ಅಥವಾ ಪತ್ನಿ ವಾಸ ಸ್ಥಳ ಧೃಢೀಕರಣ ಪತ್ರ.
3. ಪತಿ–ಪತ್ನಿಯ ಸಂಬಂಧ ಸೂಚಿಸುವ ದಾಖಲೆ (ನಾಮನಿರ್ದೇಶನ, ಮತದಾರರ ಚೀಟಿ, ಆಧಾರ್ ಕಾರ್ಡ್).
4. ಕೆ.ಜಿ.ಐಡಿ ಸಂಖ್ಯೆ , ಮೂಲ ವೇತನ ಪ್ರಮಾಣ ಪತ್ರ (ಹೆಚ್.ಆರ್.ಎಂ.ಎಸ್ ಪ್ರತಿಗಳು ),
5. ವರ್ಗಾವಣೆಯ ಅರ್ಜಿ– ಬಿ.ಇ.ಓ ಅನುಮೋದಿತ ಪ್ರತಿ
6. ಪತಿ ಅಥವಾ ಪತ್ನಿಯ ಕೆ.ಜಿ.ಐ.ಡಿ ಪಾಲಿಸಿ ಪ್ರತಿಗಳು
7. ಪತಿ ಅಥವಾ ಪತ್ನಿ ಒಬ್ಬರು ಸರ್ಕಾರಿ ನೌಕರರು ಪ್ರಕರಣದಲ್ಲಿ ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ

**ಪ್ರಾಥಮಿಕ ಶಾಲಾ ಶಿಕ್ಷಕರು ದಿನಾಂಕ 27.8.2015 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ( www.schooleducation. kar.nic.in) Transfer information( Teachers) ಪ್ರಕಟಿಸಲಾಗಿರುವ ಅಂತಿಮ ಆದ್ಯತಾ ಪಟ್ಟಿಯನ್ನು ನೋಡಿಕೊಂಡು ಅದರಲ್ಲಿನ ಆದ್ಯತಾ ಕ್ರಮ ಸಂಖ್ಯೆಯನ್ನು ಗಮನಿಸಿ ಕೌನ್ಸೆಲಿಂಗ್‌ಗೆ ಹಾಜರಾಗುವುದು.**

**ಪ್ರೌಢಶಾಲಾ ಶಿಕ್ಷಕರು** ದಿನಾಂಕ 05-09-2015 **ರಂದು ಇಲಾಖಾ ವೆಬ್‌ಸೈಟ್‌ನಲ್ಲಿ** (**www.schooleducation.kar.nic.in) Transfer information( Teachers) ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಸಂಬಂಧಿಸಿದಂತೆ ಪ್ರಕಟಿಸಲಾಗಿರುವ ಅಂತಿಮ ಆದ್ಯತಾ ಪಟ್ಟಿಯನ್ನು ನೋಡಿಕೊಂಡು ಅದರಲ್ಲಿನ ಆದ್ಯತಾ ಕ್ರಮಸಂಖ್ಯೆಯನ್ನು ಗಮನಿಸಿ ಕೌನ್ಸೆಲಿಂಗ್‌ಗೆ ಹಾಜರಾಗುವುದು**

ಸಹಿ/-

(ಕೆ.ಆನಂದ)

**ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಹಾಗೂ**

**ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು, ಬೆಂಗಳೂರು ವಿಭಾಗ.**